No KRNN 12 ತೆ 19-3-75

in ★ ★ ★ ★ ★
58 th Year
ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 3 ಆಣೆ

ಹರಿಜನ ಗಿರಿಜನರಿಗೆ ಹಣಕಾಸಿನ ನೆರವು

ಹಾಕಿ ಆಟಗಾರರಿಗೆ ಪಾರ್ಲಿಮೆಂಟ್‌ನ ಅಭಿನಂದನೆ

ಕೌಲಾಲಂಪುರದಲ್ಲಿ ವಿಜಯ ಗಳಿಸಿದ ಭಾರತದ ಹಾಕಿ ಆಟಗಾರರಿಗೆ ಭಾರತದ ಪಾರ್ಲಿಮೆಂಟ್ ಅಭಿನಂದಿಸಿದೆ.

●

ಕೈಗಡಿಯಾರಗಳ ವಶ

ಸುರತ್ಕಲ್‌ಗೆ ಹತ್ತಿರದ ಸಮುದ್ರ ತೀರದಲ್ಲಿ 22 ಲಕ್ಷ ರೂಪಾಯಿಗಳ ಕೈಗಡಿಯಾರಗಳು ದೊರೆತಿವೆ.

★

ಬುಧಗ್ರಹದ ಅನ್ವೇಷಣೆಯನ್ನು ಅಮೇರಿಕದ ಮೆರಿನರ್ 10 ಉಪಗ್ರಹ ಯಶಸ್ವಿ ಆಗಿ ನೆರವೇರಿಸಿದೆ.

ಬೆಂಗಳೂರಿಗೆ ಇನ್ನು ಹೆಚ್ಚು ಸಿನಿಮಾಗಳು ಬೇಡವೆಂದು ಮಂತ್ರಿ ಶ್ರೀ ಯಾಹ್ಯರವರು ತಿಳಿಸಿದ್ದಾರೆ.

ವುಡ್‌ಲಾಂಡ್ 14 3 75 ರಿಂದ

ಅಮೋಘ 3 ನೇ ವಾರ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)

ವಜ್ರಮುನಿ, ಅಶ್ವತ್ಥ್, ಬಾಲಕೃಷ್ಣ, ಕಲ್ಪನ, ಆರತಿ ದಿನ 3 ಪ್ರದರ್ಶನಗಳು

ಅಪೆರಾ 14 3 75 ರಿಂದ

ಪಣಕೋಟಂ

★

ಅಮೋಘ ತಮಿಳು ಚಿತ್ರ

ಹೊಸ ಕಾಪಿ ಏನ 3 ಪ್ರದರ್ಶನಗಳು

ಮಾಸ್ತಿಯವರ ನುಡಿ

ಬೆಂಗಳೂರಿನಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಮಾತನಾಡುತ್ತಾ ಹಿಂದೆ ಇದ್ದುದಕ್ಕಿಂತ ಈಗ ಶಿಕ್ಷಣ ಮಟ್ಟ ಕಡಿಮೆ ಆಗಿದೆ ಎಂದರು.

ಮಂತ್ರಿಗಳಿಂದ ನಿರಾಕರಣೆ

ಭೂ ನ್ಯಾಯಮಂಡಲಿಗಳ ಮುಂದೆ ಬಡ ಗೇಣಿದಾರರ ಪರ ವಾದ ಮಾಡಲು ವಕೀಲರ ನೆರವನ್ನು ಒದಗಿಸಲು ಕಾನೂನಿನ ರೀತ್ಯ ಸಾಧ್ಯವಿಲ್ಲವೆಂದು ಕಂದಾಯ ಮಂತ್ರಿ ಶ್ರೀ ಹುಚ್ಚುಮಾಸ್ತಿಗೌಡರು ವಿಧಾನ ಸಭೆಯಲ್ಲಿ ತಿಳಿಸಿದರು.

ಪ್ರಪ್ರಥಮ ಔಷಧಾಲಯ

ಭಾರತದಲ್ಲಿಯೇ ಪ್ರಪ್ರಥಮವಾಗಿ ಪ್ರಕೃತಿ ಚಿಕಿತ್ಸಾಲಯ ಒಂದನ್ನು ಯಾವತ್ ಮ್ಯಾಳ್‌ನಲ್ಲಿ ಸ್ಥಾಪಿಸಲಾಗುವದು.

ಸರ್ಕಾರದ ನಿರ್ಧಾರ

ಹರಿಜನ ಮತ್ತು ಗಿರಿಜನರಿಗೆ ಹಣ ನೆರವನ್ನು ಕೊಡಲು ಕಾರ್ಪೊರೇಷನ್ ರಚಿಸಲು ಸರ್ಕಾರ ನಿರ್ಧರಿಸಿದೆಯೆಂದು ವಿಧಾನ ಸಭೆಯಲ್ಲಿ ತಿಳಿಸಲಾಯಿತೆಂದು ಬೆಂಗಳೂರಿನಿಂದ ಬಂದ ವಾರ್ತೆ ತಿಳಿಸುತ್ತದೆ. ಹರಿಜನ ಮತ್ತು ಗಿರಿಜನರು ಈ ಕಾರ್ಪೊರೇಷನ್ ಮೂಲಕ ಕೈಗಾರಿಕೆ ಸೆಲೂನ್, ಧೋಬಿ ಅಂಗಡಿ, ನ್ಯಾಯ ಬೆಲೆ ಅಂಗಡಿ ಸ್ಥಾಪನೆಗೆ ಹಣ ಕೊಡಲಿದೆ.

○

ಕರ್ನಾಟಕ ವಿಧಾನ ಪರಿಷತ್ ಸದಸ್ಯ ಶ್ರೀ ಚನ್ನಯ್ಯ ಒಡೆಯರ್‌ರವರು ರಾಜ್ಯ ಕುರಿ ಮತ್ತು ಕುರಿ ಉತ್ಪನ್ನ ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿ ನೇಮಿತರಾಗಿರುವರುವರು.

★ ಬೆಂಕಿ ಅನಾಹುತದಿಂದ ಕೆರೂಗಾವಲಿನಲ್ಲಿ ಚಿತ್ರಸುಂದರವೊಂದು ಬೂದಿ ಆಯಿತೆಂದು ವರದಿಯಾಗಿದೆ.

ಕೊಕ್ಕೊ ರಿಫರಿ ಪರೀಕ್ಷೆ

ಈ ತಿಂಗಳು ತಾರೀಖು 23 ರಂದು ಬೆಂಗಳೂರು ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜಿನಲ್ಲಿ ಬೆಳಿಗ್ಗೆ 9–30 ರಿಂದ ರಾಜ್ಯ ಮಟ್ಟದ ಕೊಕ್ಕೊ ಪರೀಕ್ಷೆ ನಡೆಯಲಿದೆ.

★

ರಾಷ್ಟ್ರೀಯ ಕುಸ್ತಿಗಳು

ಬೆಂಗಳೂರು ನಗರದ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಹಿಂದ್ ಕೇಸರಿ ಮತ್ತು ಭಾರತ ರಾಷ್ಟ್ರೀಯ ಕುಸ್ತಿ ಸ್ಪರ್ಧೆಗಳು ಭಾರತ ರೀತಿಯುವ 19 ನೇ ತಾರೀಖಿನಿಂದ 23-ನೇ ತಾರೀಖಿನ ವರೆಗೆ ನಡೆಯುವುದು.

★

ಪರಿಹಾರ ಕೊಡಿ ಇಲ್ಲವೆ ವಿಷ ಕೊಡಿ

ಗುತ್ತಿಗೆಯಿಂದ ಬಂದುದರಲ್ಲಿ ನಾನು ಜೀವಿಸಿ ಮೂರು ಮಕ್ಕಳನ್ನು ರಕ್ಷಣೆ ಮಾಡಬೇಕು ಈಗ ಗುತ್ತಿಗೆ ಇಲ್ಲ ನನಗೆ ಪರಿಹಾರವಾದರೂ ಕೊಡಿಸಿ ಇಲ್ಲವೇ ವಿಷವನ್ನಾದರೂ ಕೊಡಿ ಎಂದು ನನ್ನಲ್ಲಿ ಬಂದು ವಿಧವೆಯೋರ್ವಳು ಗೋಳಿಟ್ಟಳು ಎಂದು ವಿಧಾನ ಸಭೆಯಲ್ಲಿ ಶ್ರೀ ಕೆ. ಹೆಚ್. ಹನುಮೇಗೌಡರು ತಿಳಿಸಿದರು

★

ಬೆಂಗಳೂರು ನಗರದಲ್ಲಿ ದರಿದ್ರರು

ಬೆಂಗಳೂರಿನಲ್ಲಿ ಸುಮಾರು ಮೂವತ್ತೇದು ಮಂದಿ ದಾರಿದ್ರ್ಯ ಪರಿಸ್ಥಿತಿಯಲ್ಲಿರುವರು.

★

ಇಡೀ ದಿನ ಔಷಧಿ ಮಾರಾಟ

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ ಮತ್ತು ಜನತಾ ಬಜಾರ್ ಇಪ್ಪತ್ತನಾಲ್ಕು ಗಂಟೆಗಳ ಹೊತ್ತು ಔಷಧ ದೊರೆವ ವ್ಯವಸ್ಥೆ ಮಾಡಿದೆ

ಹೆಚ್ಚು ಊಟ ಮಾಡಿದರೆ ....

★

ಅನಾಯುಷ್ಯಮನಾರೋಗ್ಯಮಸ್ವರ್ಗ್ಯಂ ಚಾತಿಭೋಜನಂ ।
ಅಪೀಯಂ ಲೋಕವಿದ್ವಿಷ್ಟಂ ತಸ್ಮಾತ್ತತ್ಪರಿವರ್ಜಯೇತ್ ॥

ಮಿತಿಮೀರಿದ ಊಟವು ಆಯುಷ್ಯವನ್ನು ಕಡಮೆ ಮಾಡುವುದು ; ಹೆಚ್ಚಾಗಿ ಊಟ ಮಾಡುವುದರಿಂದ ಮೊದಲು ಜೀರ್ಣಶಕ್ತಿಯು ಕುಂದಿ ಅನಾರೋಗ್ಯಕ್ಕೆ ಎಡೆಕೊಡುವುದು ; ಆರೋಗ್ಯ ಕಡಮೆಯಾದ ನರನ ಮನಶ್ಶಕ್ತಿಯು ಕುಂದುವುದು ; ಯುಕ್ತಾಯುಕ್ತ ವಿವೇಚನಾರಹಿತನಾಗಿ ಪಾಪಕರ್ಮಾಚರಣೆಗಳಲ್ಲಿ ಆಸಕ್ತನಾಗುವನು ; ಅದರಿಂದ ಸ್ವರ್ಗಸುಖವು ಸ್ವಪ್ನವ್ಯಾಯವಾಗುವುದು ; ಪಾಪಕರ್ಮಾಚರಣೆಯು ಫಲವಾಗಿ ಭೋಗಾಭಾಗ್ಯಗಳು ಕೈಬಿಟ್ಟುಹೋಗುವವು ; ಪಾಪದ ಫಲವಾಗಿ ಬಂದ ದಾರಿದ್ರ್ಯ ನಿವಾರಣೆಗೆಂದೂ ಬುದ್ಧಿಕೆಟ್ಟು ಮಾನವನು ಮತ್ತೊಂದು ಪಾಪವನ್ನು ಮಾಡತೊಡಗುವನು ; ಆಗ ಲೋಕನಿಂದನೆಗೆ ಗುರಿಯಾಗುವನು.

ಇವ್ಕು ಅನರ್ಥಗಳಿಗೆ ಕಾರಣ ' ಮಿತಿಯಿಲ್ಲದ ಊಟ"; ಅದನ್ನು ಬಿಡಬೇಕು ಮಿತವೂ ಹಿತವೂ ಆದ ಆಹಾರವನ್ನು ಸೇವಿಸಬೇಕು ಎಂದು ಮನುವು ಹೇಳಿದ್ದಾನೆ.

ಇದಕ್ಕೆ ಸಮರ್ಥನೆಯಾಗಿ ಆಯುರ್ವೇದವು—

ದ್ವೌ ಭಾಗೌ ಪೂರಯೇದನ್ನೈಃ ತೋಯೇನೈಕಂ ಪ್ರಪೂರಯೇತ್ ।
ಮಾರುತಸ್ಯ ಪ್ರಚಾರಾರ್ಥಂ ಚತುರ್ಥಮವಶೇಷಯೇತ್ ॥

ಹೊಟ್ಟೆಯ (ಆಹಾರಕೋಶದ) ಅಳತೆಯನ್ನು ಅರಿತುಕೊಳ್ಳಬೇಕು : ಆ ಅಳತೆಯನ್ನು (ಪ್ರಮಾಣವನ್ನು) ನಾಲ್ಕು ಭಾಗವಾಗಿ ಮಾಡಿಕೊಂಡು, ಎರಡು ಭಾಗ (ಅಂದರೆ ಆಹಾರಕೋಶದ ಅರ್ಧದಷ್ಟು) ಅನ್ನಾದಿ ಆಹಾರ ಪದಾರ್ಥಗಳನ್ನು ಸೇವಿಸಬೇಕು ; ಹಾಲು, ಮೊಸರು, ನೀರು ಮುಂತಾದ ಪಾನೀಯಗಳಿಗಾಗಿ ಮೂರನೇ ಅಂಶವನ್ನು ಪಯೋಗಿಸಿಕೊಂಡು, ನಾಲ್ಕನೇ ಭಾಗವನ್ನು ಶುದ್ಧವಾದ ವಾಯು ಸಂಚಾರಕ್ಕಾಗಿ ವಿಶಾಲವಾಗಿಡಬೇಕು.

ನಾವು ತೆಗೆದುಕೊಂಡ ಆಹಾರವು ಸುಗಮವಾಗಿ ಜೀರ್ಣವಾಗಲು ಪರಿಶುದ್ಧವಾದ ವಾಯುವಿನ ಸಂಚಾರಕ್ಕೆ ಅವಕಾಶವಿರುವಂತೆ ನೋಡಿಕೊಳ್ಳಬೇಕು ; ಅದರಿಂದ ನಾವು ತೆಗೆದುಕೊಂಡ ಆಹಾರವು ಸುಖವಾಗಿ ಜೀರ್ಣವಾಗಿ ಅದರ ಸತ್ವಾಂಶಗಳು ರಕ್ತಗತವಾಗುವುದರಿಂದ ಶಾರೀರಕ ಬಲ ಮತ್ತು ಮನೋಬಲಗಳು ವೃದ್ಧಿಗೊಳ್ಳುವವು ; ಆರೋಗ್ಯ ದೃಢಕಾಯತೆಯಿಂದ ಸುದೀರ್ಘ ಕಾಲ ಸಂತೋಷದ ಬಾಳ್ವೆಗೆ ಸಹಾಯಕವಾಗುವುದು. (ಧರ್ಮಸಂದೇಶ)

SHAKTI SUDHA

A Superb Tonic

Protect the Cow

Silver Jubilee of Gorakshana

When Journals devoted to the pious and noble cause of cow-protection, kindness to animals, ahimsa, etc., are very few and dharmic papres are short-lived, it is rejoicing that the 'Gorakshana' will be celebrating its uniqe Silver jubilee early and in a befitting manner. Donations and Messages from philanthropic, Gomata-interested humanitarian persons are fervently solicited, and this act of kindness will be gratefully acknowledged and ever remembered.

Editor 'Gorakshana" Chamarajapuam, Mysore 4

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ



Help The Gorakshana

—Humanitarian Propoganda Monthly....

Contribute Liberally to the National Defence Fund

Edited Printed and Published by Dharmapracharanirata M Krishna Rao (Proprietor) at the Satyavadi Press, Chamarajapuam Mysore